# ಆತ್ಮ ಸಖ ಗಾಲಿಬ್

- ಮಧು ಬಿರಾದಾರ
ಅತಿಥಿ ಉಪನ್ಯಾಸಕರು
ಕನ್ನಡ ವಿಭಾಗ
ವಿಶ್ವವಿದ್ಯಾಲಯ ಕಾಲೇಜು
ಮಂಗಳೂರು - ೫೭೫೦೦೧
ಮೊ. ೯೬೮೬೬೪೫೨೬೩

ಗಾಲಿಬ್
ಯಾರನ್ನು ದೇವರ ಮಟ್ಟಕ್ಕೆ ಏರಿಸಿ
ಆರಾಧಿಸುತ್ತೇನೋ
ಅವರಲ್ಲಿಯ
ಕೊಳೆತ ಚರಂಡಿ ವಾಸನೆ
ಕಣ್ಣು ಮೂಗು ಕಿವಿಗೆ ಬಡಿದಾಗ
ನನ್ನಷ್ಟಕ್ಕೆ ನಾನೇ ಕೊಲೆಯಾದಂತೆನಿಸಿ
ತಲೆಜಾಡಿಸಿ ಮೈಕೊಡವಿ ಹೊರಡುತ್ತೇನೆ
ಏಕಾಂತಕೆ
ಏಕತಾರಿ ಬಗಲಿಗಾಕಿ

ಗಾಲಿಬ್
ಹೊಟ್ಟೆಗಾಗಿ ಮೈ ಮಾರಾಟ ಈಗ ಇತಿಹಾಸ
ಬೆಳಕಿನ ಕಿರೀಟಕ್ಕಾಗಿ
ಭ್ರಮೆ ಹೊತ್ತು
ಮನೆ ಬಾಗಿಲ ಅದಲಿ ಬದಲಿ
ಅಸಲಿ ಖಯಾಲಿಯಾಗಿದೆ

ಗಾಲಿಬ್
ಮೇಲಿಂದ ಕೆಳಗೆ
ಭೂಮ್ಯಾಕಾಶದ ಲೋಕಕೆ
ದೂರದ ಬೆಟ್ಟಕ್ಕೆ ಮೆತ್ತಿದ

ಬಿಸಲ್ಲುದರೆ ಬಣ್ಣ

ಬಣ್ಣ ಅಂಟಿದ

ಅಂಟಿನ ರೋಗ

ಇಮಾನದ ಅಟ್ಟದವರೆಗೆ

ಗಾಲಿಬ್

ಹೇಗೆ ಹೇಳಲಿ

ಅರ್ಧ ಶತಮಾನದಾಚೆಯ ಕನ್ನಡ ಸ್ಥಿತಿ ಬಗ್ಗೆ

ನಾನು ನನ್ನದು ಎಲ್ಲವೂ ಅಳಿಯಲಿ

ನನ್ನಮ್ಮ ಕನ್ನಡ?

ಅಯ್ಯೋ!

ದ್ರೋಹಿಗಳು ವಿಷದ ತಟ್ಟೆ ಹಿಡಿದು

ಅಲೆಯುತ್ತಿದ್ದಾರೆ ಒಣಿ ಒಣಿ

ಗಾಲಿಬ್

ಪೀಠ ಕೈ ಕಾಲು ಮುರಿದು

ಬಿದ್ದಾಗಲೂ

ಹೊತ್ತು ಅಲೆಯುವ ಹುಚ್ಚೇಕೆ?

ಗಾಲಿಬ್

ಸೂರ್ಯ ಹುಟ್ಟುವಾಗಿನ ಸಂಭ್ರಮದಷ್ಟೇ

ಅಸು ನೀಗುವಾಗಿನ ನೋವು

ಹೇಳಿಕೊಳ್ಳಲಾಗದಷ್ಟು ಮೌನ ಬೇಗುದಿ

ಗಾಲಿಬ್

ಸತ್ಯ ಮುಚ್ಚಿಟ್ಟವರಿಗೆ

ಇನ್ನೇನು ಉಪದೇಶ ಮಾಡುವಿ?

ಗಾಲಿಬ್
ಸಂತೆಯ ಲೋಕ ದಕ್ಕುತ್ತಿಲ್ಲ
ಏಕಾಂತ ಮುಟ್ಟಿಸಿಕೊಳ್ಳುತ್ತಿಲ್ಲ
ಮಧುಶಾಲೆಯ ಒಳಹೊರ ಗೊತ್ತಿದ್ದರೂ
ವಾರಸುದಾರ ನಾನೊಲ್ಲೆ
ಏಕತಾರಿ ಹಿಡಿದು ಹೊರಡೋಣವೆಂದರೆ
ನನಗೆ ನನ್ನದೆ ದಾರಿ ಇಲ್ಲದಂತಾಗಿದೆ.

ಹೌದು ಗಾಲಿಬ್
ಇಲ್ಲಿ ಮುಕ್ತಿಯಿಲ್ಲ
ನನ್ನೊಳಗೆ ನಾನೇ ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ.